Fax: 08282-256262 Phone No - 08282-256149
E-mail:kuvempuacademic@gmail.com Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಎಸಿ–3:ಬಿ.ಇಡಿ.:ಇತರೆ: 5284/2021–22 ದಿನಾಂಕ:16–02–2022

## ಸುತ್ತೋಲೆ

ವಿಷಯ: ಸರ್ಕಾರದ ಕೋಟಾದಡಿ ಖಾಲಿ ಉಳಿದ ಬಿ.ಇಡಿ. ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶದ ಸಂಖ್ಯೆ:ಇಡಿ:124:ಯುಆರ್‌ಸಿ:2021, ಬೆಂಗಳೂರು, ದಿನಾಂಕ:03–02–2022.

2. ಈ ಕಛೇರಿ ಪರಿಷ್ಕೃತ ಅಧಿಸೂಚನೆ – 1 ರ ಸಂಖ್ಯೆ:ಕುವಿ:ಎಸಿ-3:ಬಿ.ಇಡಿ./ವೇಳಾಪಟ್ಟಿ: 4841/2021-22, ದಿನಾಂಕ:27–01–2022.

–*****–

2021–22ನೇ ಶೈಕ್ಷಣಿಕ ಸಾಲಿನ ಬಿ.ಇಡಿ. ಪ್ರವೇಶಾತಿ ಸಂಬಂಧ ಉಲ್ಲೇಖಿತ (1)ರ ಸರ್ಕಾರದ ಆದೇಶದ ಪತ್ರದಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ ಬಿ.ಇಡಿ. ಸೀಟುಗಳನ್ನು ಆಡಳಿತ ಮಂಡಳಿ ಕೋಟಾದಡಿ ಭರ್ತಿ ಮಾಡಿಕೊಳ್ಳಲು ಆದೇಶ ನೀಡಿರುವುದರಿಂದ ಖಾಲಿ ಉಳಿದ ಸರ್ಕಾರದ ಸೀಟುಗಳನ್ನು ಉಲ್ಲೇಖಿತ (2)ರ ವೇಳಾಪಟ್ಟಿಯಲ್ಲಿ ನಿಗದಿಪಡಿಸಿರುವ ದಿನಾಂಕದೊಳಗಾಗಿ ಪ್ರವೇಶಾತಿ ಮಾಡಿಕೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ವಿಶ್ವವಿದ್ಯಾಲಯದಿಂದ ಅನುಮತಿ ನೀಡಲಾಗಿದೆ.

1. ನೈಜ ಖಾಲಿ ಸೀಟುಗಳನ್ನು ಮೀರಿ ಭರ್ತಿ ಮಾಡಿಕೊಳ್ಳಲಾಗುವ ದಾಖಲಾತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
2. ಸರ್ಕಾರಿ ಕೋಟಾದಡಿಯ ಸೀಟುಗಳನ್ನು ಭರ್ತಿಮಾಡಿಕೊಂಡಿರುವುದರಲ್ಲಿ ಲೋಪ/ವ್ಯತಿರಿಕ್ತಕ್ರಮಗಳು ಕಂಡುಬಂದಲ್ಲಿ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.
3. ಸರ್ಕಾರವು ವಿಧಿಸಿರುವ ಶುಲ್ಕವನ್ನು ಹಾಗೂ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.
4. ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಕಡ್ಡಾಯವಾಗಿ ಮೀಸಲಿಡತಕ್ಕದ್ದು. ಒಂದು ವೇಳೆ ಕರ್ನಾಟಕದ ವಿದ್ಯಾರ್ಥಿಗಳು ಲಭ್ಯವಾಗದಂತಹ ಅನಿವಾರ್ಯ ಹಾಗೂ ವಿರಳ ಸಂದರ್ಭಗಳಲ್ಲಿ ಮಾತ್ರ 10 ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಅನ್ಯ ರಾಜ್ಯದ ವಿದ್ಯಾರ್ಥಿಗಳನ್ನು ಪರಿಗಣಿಸಬಹುದಾಗಿದ್ದು, 10 ವರ್ಷಗಳಿಗೆ ಕಡಿಮೆ ಇರದ ಅವಧಿಯಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವುದನ್ನು ದೃಢಪಡಿಸಲು ದಾಖಲೆಗಳನ್ನು ಸಲ್ಲಿಸತಕ್ಕದ್ದು.
5. ಸರ್ಕಾರಿ ಕೋಟಾದಡಿಯ ಖಾಲಿ ಸೀಟುಗಳ ಪ್ರವೇಶ ದಾಖಲಾತಿ ಪ್ರಕ್ರಿಯೆಯನ್ನು ನಿಗದಿಪಡಿಸಿದ ಅಂತಿಮ ಕಾಲಮಿತಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.
6. ಈಗಾಗಲೇ ತರಗತಿಗಳು ಪ್ರಾರಂಭವಾಗಿದ್ದಲ್ಲಿ ವಿಳಂಬವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಜರಾತಿ ಕೊರತೆಯಾದಲ್ಲಿ ಕಾಲೇಜಿನವರೇ ಜವಾಬ್ದಾರರಾಗುವರು.
7. ಹೈದರಾಬಾದ್–ಕರ್ನಾಟಕದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡತಕ್ಕದ್ದು ಮತ್ತು ಈ ಸಂಬಂಧ ಮಾಹಿತಿ / ದಾಖಲೆ ಒದಗಿಸುವುದು.

ಕರಡು ಪರಿಶೀಲಿಸಲಾಗಿದೆ
ಅನುಮೋದಿಸಲ್ಪಟ್ಟಿದೆ

16/02/22
ಉಪಕುಲಸಚಿವರು
ಉಪ ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳು.

ಪ್ರತಿಗಳು:

1. ಆಪ್ತ ಸಹಾಯಕರು: ಕುಲಪತಿ: ಕುಲಸಚಿವ: ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಸಂಯೋಜನಾಧಿಕಾರಿಗಳು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,–ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.

Circuler